KATK900005432019

5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

ತಿಪಟೂರು

ಎಸ್.ಸಿ.ಸಂಖ್ಯೆ: 10039/2019

ಪ್ರಮಾಣೀಕರಿಸಿದ ದಿನಾಂಕ: 12-12-2024

ಚಾ.ಸಾ-21

ಪ್ರಾ.ಸಾ-16

| | |
|---|---|
| ಹೆಸರು | ಡಾ: ರುದ್ರ ಮೂರ್ತಿ ಎಸ್. |
| ತಂದೆ ಹೆಸರು | ಲೇಟ್ ಸಿದ್ದರಾಜು |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಹಿರಿಯ ವೈದ್ಯ ನ್ಯಾಯ ಶಾಸ್ತ್ರ ತಜ್ಞರು |
| ವಾಸಸ್ಥಳ | ವಿಶ್ವೇಶ್ವರಯ್ಯ ಲೇಔಟ್, ಬೆಂಗಳೂರು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ತುಮಕೂರು ಜಿಲ್ಲಾ ಆಸ್ಪತ್ರೆಗೆ ಜೂನ್ 2010 ರಿಂದ ಮೇ 2021 ರವರೆಗೆ ಹಿರಿಯ ವೈದ್ಯ ನ್ಯಾಯ ಶಾಸ್ತ್ರ ತಜ್ಞರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿನಾಂಕ 17-02-2019 ರಂದು ಯು.ಡಿ.ಆರ್. 2/2019 ಕ್ಕೆ ಸಂಬಂಧಿಸಿದಂತೆ, ತುರುವೇಕೆರೆ ಪೋಲಿಸ್ ಠಾಣೆಯ ಪಿ.ಐ. ರವರು ಮೃತ ಸುರೇಶ್ ಬಿನ್ ಶಿವಣ್ಣ, ವಯಸ್ಸು 48 ವರ್ಷ ಇವರ ಮೃತ ದೇಹದ ಶವ ಪರೀಕ್ಷೆಯನ್ನು ಮಾಡಿ ವರದಿ ನೀಡಲು ಮನವಿ ಸಲ್ಲಿಸಿದ್ದರು. ಅದೇ ದಿನ ಸಂಜೆ 4.45 ರಿಂದ 5.45 ವರೆಗೆ ಜಿಲ್ಲಾ ಆಸ್ಪತ್ರೆ ತುಮಕೂರಿನ ಶವಗಾರದಲ್ಲಿ ಮರಣೋತ್ತರ ಪರೀಕ್ಷೆಯನ್ನು ನೆಡೆಸಿರುತ್ತೇನೆ.

ಶವವನ್ನು ಶೀಥಲೀಕರಣ ಪೆಟ್ಟಿಗೆಯಲ್ಲಿ ಇಟ್ಟಿರುವುದಿಲ್ಲ. ಆದ್ದರಿಂದ ಮೃತನ ಮರಣದ ಸಮಯವನ್ನು ತಿಳಿಯಲು ಸಾಧ್ಯವಾಗಿತ್ತು. ಮೃತ ನಾನು ಪರೀಕ್ಷೆ ಮಾಡಿದ ಹಿಂದಿನ 12.00 ರಿಂದ 24 ಗಂಟೆಯೊಳಗೆ ಮೃತ ಪಟ್ಟಿದ್ದ . ಶವದ ಮೇಲೆ

1) ರಕ್ತದ ಕಲೆಗಳಿಂದ ಕೂಡಿದ ಬೂದು ಬಣ್ಣದ ಪ್ಯಾಂಟು. 2) ರಕ್ತದ ಕಲೆಗಳಿಂದ ಕೂಡಿದ ಖಾಕಿ ಬಣ್ಣದ ನಿಕ್ಕರ್. 3) ರಕ್ತದ ಕಲೆಗಳಿಂದ ಕೂಡಿದ ಆಂಗ್ಲಭಾಷಯಲ್ಲಿ ೦ರಿಠಠಡಿತಫಿ, ಖಚಿಡಿಭಿತಿಚಿಣಖ ಕಣಡಿಚಿಟ, ಒಥಿಠಡಿಜ ಎಂದು ಲೇಬಲ್ ಇದ್ದ ಅರ್ಧ ತೋಳಿನ ಬಿಳಿ ಬಣ್ಣದ ಶರ್ಟು 4) ರಕ್ತದ ಕಲೆಗಳಿಂದ ಕೂಡಿದ ಬಿಳಿ ಮತ್ತು ಹಳದಿ ಬಣ್ಣದ ಟವೆಲ್ . 5) ರಕ್ತದ ಕಲೆಗಳಿಂದ ಕೂಡಿದ ಗಡಸು ನೀಲಿ ಬಣ್ಣದ ಆಂಗ್ಲಭಾಷಯಲ್ಲಿ ಖಿಟಥಜಡಿ ಟಚಿಟಜ ಎಂದು ಲೇಬಲ್ ಇದ್ದ ಜರ್ಕಿನ್ ಬಟ್ಟೆಗಳು ಇದ್ದವು. ಈ ಎಲ್ಲಾ ಬಟ್ಟೆಗಳನ್ನು ಸಂಬಂದಪಟ್ಟ ಆರಕ್ಷರಲ್ಲಿ ಮೊಹರು ಮಾಡದ ಸ್ಥಿತಿಯಲ್ಲಿ ಹಿಂದಿರುಗಿಸಿದ್ದೇನೆ.

ಶವದ ಉದ್ದ 170 ಸೆಂ.ಮೀ. ಇದ್ದು ಸಾಧಾರಣಾ ಮೈಕಟ್ಟಿನಿಂದ ಕೂಡಿತ್ತು. ರೈಗರ್ ಮಾರ್ಟೀಸ್ ದೇಹದ ಎಲ್ಲಾ ಭಾಗಗಳಲ್ಲಿ ಇತ್ತು. ಮರಣೋತ್ತರ ಕಲೆಗಳು ದೇಹದ ಹಿಂಭಾಗದಲ್ಲಿ ಇದ್ದವು. ಶವದ ಮೇಲೆ 1) 4 ಘಿ 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ತರಚಿದ ಗಾಯ ತಲೆಯ ಬಲಭಾಗದಲ್ಲಿದ್ದು , ಅದರ ಕೆಳಗಿನ ಮೂಳೆಗಳು ಮುರಿದಿದ್ದವು. 2) 2 ಘಿ 1 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ತಲೆಯ ಎಡಭಾಗದಲ್ಲಿ ಎಡಕಿವಿಯ ಹಿಂಭಾಗದಲ್ಲಿ ಇತ್ತು, ಅದರ ಮೂಳೆಗಳು ಮುರಿದಿದ್ದವು. 3) 6 ಘಿ 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ತಲೆಯ ಎಡಭಾಗದಲ್ಲಿದ್ದು, ಎಡಕಿವಿಯ 6 ಸೆಂ.ಮೀ. ನ ಅಂತರದಲ್ಲಿ ಇತ್ತು, ಅದರ ಮೂಳೆಗಳು ಮುರಿದಿದ್ದವು. 4) 6 ಘಿ 0.5 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ಗಾಯದ ಸಂಖ್ಯೆ 3 ರ ಹಿಂದಕ್ಕೆ 3 ಸೆಂ.ಮೀ.ನ ಅಂತರದಲ್ಲಿ ಇತ್ತು, ಅದರ ಮೂಳೆಗಳು ಮುರಿದಿದ್ದವು.

5) 5 ಘಿ 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ಹರಿದ ಗಾಯವು ತಲೆಯ ಮೇಲೆ ಇತ್ತು , ಅದರ ಮೂಳೆಗಳು ಮುರಿದಿದ್ದವು.

6) 11 ಘಿ 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ತರಚಿದ ಗಾಯವು ಎಡಕಿವಿ ಹಾಗೂ ಎಡಭಾಗದ ತಲೆಯ ಮೇಲಿದ್ದು, ಅದರ ಕೆಳಗಿನ ಮೂಳೆಗಳು ಮುರಿದಿದ್ದವು.

7) 3 ಘಿ 3 ಸೆಂ.ಮೀ. ಅಳತೆಯ ಊತದಿಂದ ಕೂಡಿದ ತರಚಿದ ಗಾಯವು ಎಡಕಣ್ಣು ಮತ್ತು ಎಡಕಿವಿಯ ಮಧ್ಯದಲ್ಲಿ ಇತ್ತು. 8) ಎಡಗಣ್ಣಿನ ಮೇಲ್ಬಾಗ ಕಪ್ಪಾಗಿತ್ತು.

9) ಎಡಭಾಗದ ಕತ್ತು ಹಾಗೂ ಬಲಭಾಗದ ಹೊಟ್ಟೆಯಲ್ಲಿ ಅಲ್ಲಲ್ಲಿ ಇರುವೆಗಳು ಕಚ್ಚಿರುವ ನಿಶಾನೆ ಇತ್ತು ಅದು ಮರಣ ಪೂರ್ವ ಆಗಿತ್ತು. ಮೇಲ್ಕಂಡ ಎಲ್ಲಾ ಗಾಯಗಳು ದೇಹದ ಹೊರಭಾಗದಲ್ಲಿದ್ದವು.

ಶವವನ್ನು ಕತ್ತರಿಸಿ ನೋಡಲಾಗಿ ತಲೆ ಬುರುಡೆ ಚರ್ಮದ ಒಳಭಾಗದಲ್ಲೆಲ್ಲಾ ನೀಲಿ ಗಟ್ಟಿದ ಗಾಯಗಳಿಂದ ಕೂಡಿತ್ತು.

ತಲೆಯ ಬುರುಡೆಯ ಮೂಳೆಗಳು ಹಾಗೂ ತಲೆಯ ಕಳೆಗಿನ ಮೂಳೆಗಳೆಲ್ಲವೂ ಅನೇಕ ಮೂಳೆ ಮುರಿತದಿಂದ ಕೂಡಿತ್ತು.

ಮೆದುಳಿನ ಪೊರೆಗಳು ಸುಸ್ಥಿತಿಯಲ್ಲಿತ್ತು. ಮೆದುಳು ಊತದಿಂದ ಕೂಡಿದ್ದು ಹಾಗೂ ಮೆದುಳಿನ ಎಲ್ಲಾ ಭಾಗಗಳು ರಕ್ತಸ್ರಾವದಿಂದ ಕೂಡಿರುವುದು ಕಂಡುಬಂತು.

ಎದೆಗೂಡಿನ ಹೊರಭಾಗ ಹಾಗೂ ಪಕ್ಕೆಲುಬುಗಳು ಸುಸ್ಥಿತಿಯಲ್ಲಿದ್ದವು. ಎದೆಗೂಡಿನ ಎಲ್ಲ್ಕಾ ಒಳ ಅಂಗಗಳು ಸುಸ್ಥಿತಿಯಲ್ಲಿದ್ದವು.

ಹೊಟ್ಟೆಯ ಹೊರಭಾಗ ಸುಸ್ಥಿತಿಯಲ್ಲಿತ್ತು. ಜಠರದಲ್ಲಿ 220 ಎಂ.ಎಲ್ ನಷ್ಟು ಗಡುಸಾದ ದ್ರವದಿಂದ ಕೂಡಿದ್ದು ಹಾಗೂ ಮಧ್ಯ ಸಾರದ ವಾಸನೆ ಇತ್ತು. ಪಿತ್ತಜನಕಾಂಗವು ದೊಡ್ಡದಾಗಿತ್ತು. ಉಳಿದಂತೆ ಹೊಟ್ಟೆಯಲ್ಲಿ ಅಂಗಾಂಗಗಳು ಸುಸ್ಥಿತಿಯಲ್ಲಿದ್ದವು.

ಎರಡೂ ಮೂತ್ರ ಜನಕಾಂಗಗಳು ಸುಸ್ಥಿತಿಲ್ಲಿದ್ದು ಮೂತ್ರಕೋಶವು ಖಾಲಿ ಇತ್ತು ಹೊರಗಿನ ಮತ್ತು ಒಳಗಿನ ಸಂತಾನಾಭಿವೃದ್ಧಿ ಯಂತ್ರವು ಸುಸ್ಥಿತಿಯಲ್ಲಿತ್ತು. ಶವದ ಕುತ್ತಿಗೆಯನ್ನು ಕೊಯ್ದು ನೋಡಲಾಗಿ ಅದರ ಒಳಗಿನ ಎಲ್ಲಾ ಅಂಗಾಗಂಗಳು ಸುಸ್ಥಿತಿಯಲ್ಲಿದ್ದವು.

ಮೃತ ದೇಹದಿಂದ ರಕ್ತದ ಮಾದರಿಯನ್ನು ಶೇಖರಿಸಿ ಮೊಹರು ಮಾಡಿ ಸಂಬಂದಪಟ್ಟ ಅರಕ್ಷಕರಿಗೆ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಯಿತು.

ಮೃತ ದೇಹದಲ್ಲಿ ಕಂಡು ಬಂದಂತ ಎಲ್ಲಾ ಗಾಯಗಳು ಮರಣಪೂರ್ವ ಗಾಯಗಳಾಗಿದ್ದು , ಹಾಗೂ ಸದರಿ ಗಾಯಗಳ ಅವಧಿಯು ಮರಣದ ಸಮಯಕ್ಕೆ ತಾಜಾ ಗಾಯ ಆಗಿದ್ದವು.

ನನ್ನ ಅಭಿಪ್ರಾಯದಲ್ಲಿ ಮೃತ ವ್ಯಕ್ತಿಯ ತಲೆಗೆ ಆದಂತಹ ಗಾಯದ ಪರಿಣಾಮವಾಗಿ ಮೃತ ಪಟ್ಟಿರುವುದಾಗಿ ತಾತ್ಕಾಲಿಕ ಅಭಿಪ್ರಾಯವನ್ನು ನೀಡಿದ್ದೇನೆ. ಇದು ಸದರಿ ಶವಪರೀಕ್ಷಾ ವರದಿ. ( ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.12 ಎಂದು ಗುರುತಿಸಲಾಯಿತು). ಇವು ನನ್ನ ಸಹಿಗಳು . ( ಸಾಕ್ಷಿ ಗುರುತಿಸಿದ್ದು ನಿಪಿ.12(ಎ) ಮತ್ತು 12(ಬಿ) ಎಂದು ಗುರುತಿಸಲಾಯಿತು.)

ದಿನಾಂಕ 19-02-2019 ರಂದು ತುರುವೇಕೆರೆ ಪೋಲಿಸ್ ಠಾಣೆಯ ಪಿ. ಐ ರವರು ಒಂದು ಮನವಿಯನ್ನು ಸಲ್ಲಿಸಿದ್ದು ಅದರಲ್ಲಿ ಮೃತ ಸುರೇಶ್ ರವರಿಗೆ ಉಂಟಾಗಿರುವ ಗಾಯಗಳು ಯಾವ ರೀತಿ ಆಗಿರುತ್ತದೆ ಎಂದು ಅಭಿಪ್ರಾಯ ಕೋರಿ ರುತ್ತಾರೆ. ಅದೇ ದಿನ ನಾನು ನನ್ನ ಅಭಿಪ್ರಾಯವನ್ನು ಮೃತ ವ್ಯಕ್ತಿಯ ಹೊರಗಾಯಗಳಾದ 1 ರಿಂದ 8 ಹಾಗೂ ಅದಕ್ಕೆ ಸಂಬಂದಪಟ್ಟ ಒಳಗಾಯಗಳು ಗಡುಸಾದ, ಮೊಂಡಾದ ಹಾಗೂ ಒರಟಾದ ಆಯುಧದಿಂದ ಆಗುವ ಸಾಧ್ಯತೆ ಇರುವುದಾಗಿ ಅಭಿಪ್ರಾಯ ನೀಡಿರುತ್ತೇನೆ. ಇದು ಸದರಿ ಮನವಿ ಪತ್ರ. (ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.13 ಎಂದು ಗುರುತಿಸಲಾಯಿತು). ಇದು ನನ್ನ ಸಹಿ. ( ಸಾಕ್ಷಿ ಗುರುತಿಸಿದ್ದು ನಿಪಿ.13(ಎ) ಎಂದು ಗುರುತಿಸಲಾಯಿತು.) ಇದು ನನ್ನ ಅಭಿಪ್ರಾಯ ವರದಿ. ( ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.14 ಎಂದು ಗುರುತಿಸಲಾಯಿತು). ಇದು ನನ್ನ ಸಹಿ. ( ಸಾಕ್ಷಿ ಗುರುತಿಸಿದ್ದು ನಿಪಿ.14(ಎ) ಎಂದು ಗುರುತಿಸಲಾಯಿತು.)

ದಿನಾಂಕ 03-05-2019 ರಂದು ತುರುವೇಕೆರೆಯ ವೃತ್ತ ನಿರೀಕ್ಷಕರು ಒಂದು ಮನವಿಯೊಂದಿಗೆ ಮೊಹರು ಮಾಡಿದ ಸ್ಥಿತಿಯಲ್ಲಿ ಒಂದು ಸೀಲ್ ಆದಂತಹ ಬಿಳಿಯ ಚೀಲದಲ್ಲಿದ್ದಂತಹ ಆಯುಧವನ್ನು ಕಳುಹಿಸಿದ್ದು, ಆ ಆಯುಧವನ್ನು ಪರೀಕ್ಷೆ ಮಾಡಿ ಮೃತ ದೇಹದಲ್ಲಿ ಕಂಡುಬಂದಂತ ಗಾಯದ ಬಗ್ಗೆ ಅಭಿಪ್ರಾಯ ಕೋರಿರುತ್ತಾರೆ. ಮೊಹರನ್ನು ತೆಗೆದು ನೋಡಲಾಗಿ ಅದರಲ್ಲಿ 94.5 ಸೆಂ.ಮೀ. ಫ 5 ಸೆಂಮಿ. ಫ 2.5 ಸೆಂ.ಮಿ. ಅಳತೆಯ ಮರದ ರಿಪೀಸು ಆಗಿದ್ದು ಅದರ ಎರಡು ತುದಿಗಳು ಕುಯ್ದುದ್ದವು. ಅದರ ಮೇಲ್ಬಾಗವು ಒರಟಾಗಿತ್ತು. ಮತ್ತು ಅದರ ಮೇಲೆ 6 ಮೊಳೆಗಳು ಇದ್ದವು.

ನನ್ನ ಅಬಿಪ್ರಾಯದಲ್ಲಿ ಮೃತ ದೇಹದ ಹೊರಭಾಗದಲ್ಲಿ ಇದ್ದಂತಹ 1 ರಿಂದ 8 ಗಾಯಗಳು ಹಾಗೂ ಒಳಗಿನ ಗಾಯಗಳು ನಾನು ಪರೀಕ್ಷೆ ಮಾಡಿದಂತಹ ಮರದ ರೀಪೀಸ್ ನಿಂದ ಆಗುವ ಸಾಧ್ಯತೆಗಳು ಇರುವುದಾಗಿ ಅಬಿಪ್ರಾಯ ನೀಡಿರುತ್ತೇನೆ. ನಂತರ ಆಯುಧವನ್ನು ಮತ್ತೆ ಮೊಹರು ಮಾಡಿದ ಸ್ಥಿತಿಯಲ್ಲಿ ಸಂಬಂದಪಟ್ಟ ಅರಕ್ಷಕರಿಗೆ ಮಾದರಿ ಸೀಲಿನೊಂದಿಗೆ ಹಿಂದಿರುಗಿಸಿರುತ್ತೇನೆ. ಇದು ಆಯುಧ ಪರೀಕ್ಷೆ ಮಾಡಿದ ಅಭಿಪ್ರಾಯದ ವರದಿ. (ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ.15 ಎಂದು ಗುರುತಿಸಲಾಯಿತು). ಇದು ನನ್ನ ಸಹಿ. ( ಸಾಕ್ಷಿ ಗುರುತಿಸಿದ್ದು ನಿಪಿ.15(ಎ) ಎಂದು ಗುರುತಿಸಲಾಯಿತು.) ಇದೇ ಮರದ ರಿಪೀಸನ್ನು ಆ ದಿನ ನನ್ನ ಮುಂದೆ ಹಾಜರುಪಡಿಸಿ ಅಭಿಪ್ರಾಯ ಪಡೆದಿದ್ದು. (ಸಾಕ್ಷಿ ಮು. ಮಾ. 7 ನ್ನು ಗುರುತಿಸಿದ್ದಾರೆ)

ಇದರ ಮೇಲೆ ನನ್ನ ಸಹಿ ಇದೆ. (ಸಾಕ್ಷಿ ಮ. ಮಾ. 7 ರ ಮೇಲಿನ ಸಹಿಯನ್ನು ಗುರುತಿಸಿದ್ದು ನಿಪಿ.7(ಎ) ಎಂದು ಗುರುತಿಸಲಾಯಿತು.)

**(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಸರ್ಕಾರಿ ಅಭಿಯಾೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**

**ಮರುಪ್ರಮಾಣೀಕರಿಸಿದ ದಿನಾಂಕಃ 25.04.2026.**

**ಮಧ್ಯಂತರ ಅರ್ಜಿಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿಃ 28.01.2025 ರಂದು ವೃತ್ತ ನಿರೀಕ್ಷಕರು ತುರುವೇಕೆರೆ ರವರು ಮನವಿಯನ್ನು ಸಲ್ಲಿಸಿದ್ದು, ಅದರ ಜೊತೆಗೆ FSL ವರದಿಗಳನ್ನು ಸಲ್ಲಿಸಿದ್ದು, ಅಂತಿಮ ಅಭಿಪ್ರಾಯವನ್ನು ಕೋರಿರುತ್ತಾರೆ. ಅದರಂತೆ ದಿಃ 28.01.2025 ರಂದು ಶವ ಪರೀಕ್ಷಾ ವರದಿಯನ್ನು ಹಾಗೂ FSL ವರದಿಗಳಾದ ನಿ.ಪಿ-20 ಹಾಗೂ 25 ಅನ್ನು

ಪರಿಶೀಲಿಸಿ ಮೃತ ವ್ಯಕ್ತಿಗೆ ತಲೆಗೆ ಆದಂತಹ ಗಾಯಗಳ ಪರಿಣಾಮವಾಗಿ ಸಾವು ಸಂಭವಿಸಿರುವುದಾಗಿ ಹಾಗೂ ಮೃತ ವ್ಯಕ್ತಿಯೂ ಸಾಯುವ ಸಮಯದಲ್ಲಿ ಮಧ್ಯಪಾನವನ್ನು ಸೇವಿಸಿದ್ದು, ಅದರ ಅಮಲಿನಲ್ಲಿ ಇರುವುದಾಗಿ ಅಭಿಪ್ರಾಯ ಪಟ್ಟು ಅಂತಿಮ ವರದಿಯನ್ನು ನೀಡಿರುತ್ತೇನೆ. ಸದರಿ ಮನವಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು **ನಿ.ಪಿ–44** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–44(ಎ) ಎಂದು ಗುರುತಿಸಲಾಯಿತು. ಸದರಿ ಅಭಿಪ್ರಾಯ ವರದಿಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಅಭಿಪ್ರಾಯ ವರದಿಯನ್ನು **ನಿ.ಪಿ–45** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–45(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಡಿ ವಕೀಲರಿಂದಃ</u>

ಸದರಿ ನಿ.ಪಿ–12 ಪಿ.ಎಂ ವರದಿಯಲ್ಲಿ ಮೃತ ಸುರೇಶ್ ಎಷ್ಟು ಗಂಟೆಗೆ ಮೃತ ಪಟ್ಟಿರುತ್ತಾನೆಂದು ನಿಖರವಾದ ಸಮಯ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಮುದ್ದೆಮಾಲು–3 ಮತ್ತು ರಿ ಬೂದು ಬಣ್ಣದ ಪ್ಯಾಂಟ್ ಹಾಗೂ ಕಾಕಿ ನಿಕ್ಕರ್ ಗಳ ಮೇಲೆ ಎಷ್ಟು ಕಡೆಗಳಲ್ಲಿ ರಕ್ತದ ಕಲೆಗಳಾಗಿರುತ್ತದೆ ಎಂದು ನಾನು ಗಮನಿಸಿರುವುದಿಲ್ಲ. ಸದರಿ ಮುದ್ದೆಮಾಲು–1 ರಿಂದ 4 ಬಟ್ಟೆಗಳ ಮೇಲೆ ನಿಖರವಾಗಿ ರಕ್ತದ ಕಲೆಗಳು ಎಲ್ಲೆಲ್ಲಿ ಆಗಿರುತ್ತದೆ ಎಂದು ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಹೆಚ್ಚಿನ ಮಧ್ಯಪಾನ ಮಾಡಿದರೆ ಸಾಮಾನ್ಯವಾಗಿ ಯಾವುದೇ ವ್ಯಕ್ತಿಯೂ ಸಮತೋಲನ ಇರುವುದಿಲ್ಲ ಎಂದರೆ ಸರಿ. ಘಟನ ಸ್ಥಳದಲ್ಲಿರುವ ಮೆಟ್ಟಿಲುಗಳಲ್ಲಿ ಯಾವುದೇ ರೀತಿ

ಮಧ್ಯಪಾನ ಮಾಡಿ ಹಲವು ಬಾರಿ ಮೆಟ್ಟಿಲುಗಳ ಮೇಲೆ ಬಿದ್ದರೆ ನಿ.ಪಿ–12 ರಲ್ಲಿ ನಮೂದು ಮಾಡಿರುವ ತಲೆಗೆ ಆಗಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಸದರಿ ಮೃತ ವ್ಯಕ್ತಿಯ ಮೈ ಮೇಲೆ ಕಬ್ಬಿಣದ ಮೊಳೆಯಿಂದ ಯಾವುದೇ ಗಾಯಗಳಾಗಿರುವುದು ಕಂಡುಬಂದಿರುವುದಿಲ್ಲ ಎಂದರೆ ಸರಿ. ಸದರಿ ಮುದ್ದೆಮಾಲು–7 ರಿಪೀಸ್ ಪಟ್ಟಿಯನ್ನು ಪೊಲೀಸರು ಅಭಿಪ್ರಾಯಕ್ಕಾಗಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಸದರಿ ಮುದ್ದೆಮಾಲು–7 ರಿಪೀಸ್ ಪಟ್ಟಿಯಲ್ಲಿ ಸುಮಾರು 6 ಕಬ್ಬಿಣದ ಮೊಳೆಗಳು ಇರುತ್ತದೆ ಎಂದರೆ ಸರಿ. ಸದರಿ ಮೊಳೆಯಿರುವ ಆಯುಧದಲ್ಲಿ ಹಲ್ಲೆ ಮಾಡಿದ್ದು, ಸದರಿ ಮೊಳೆಗಳು ಜಾಗದಿಂದ ಏಟು ಬಿದ್ದರೆ ಗಾಯಗಳು ಆಗುವು ಸಂಭವ ಇರುತ್ತದೆ. ಸದರಿ ನಿ.ಪಿ–12 ಪಿ.ಎಂ ವರದಿಯಲ್ಲಿ ಮೊಳೆಯಿಂದ ಗಾಯಗಳು ಎಲ್ಲೂ ನಮೂದು ಇರುವುದಿಲ್ಲ ಎಂದರೆ ಸರಿ. ಸದರಿ ಪಿ.ಎಂ ಮಾಡುವ ಕಾಲಕ್ಕೆ ಪೊಲೀಸರು ಫಾರಂ ನಂ.146(I)(II) ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ನಾನು ಮೃತನ ಶವದ ಮೇಲೆ ಯಾವುದೇ ಶವ ಪಂಚನಾಮೆಯನ್ನು ಮಾಡಿಲ್ಲದಿದ್ದರೂ ಸಹಃ ಪೊಲೀಸರಿಗೆ ಅನುಕೂಲವಾಗುವ ರೀತಿ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೃತ ಸುರೇಶ್ ರವರು ಮಧ್ಯಪಾನ ಮಾಡಿ ಮೆಟ್ಟಿಲುಗಳಿಂದ ಬಿದ್ದು ಅದರ ಚೂಪಾನ ಏಣಿಗೆ ತಲೆ ಹೊಡೆದು ರಕ್ತಸ್ರಾವವಾಗಿ ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ತಲೆಗೆ ಆದ ಗಾಯಗಳಿಂದ ಮೃತ ಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ.

ಪೊಲೀಸರು ನನಗೆ ದಿಃ 28.01.2025 ರಂದು ಯಾವುದೇ ಅಭಿಪ್ರಾಯಕ್ಕಾಗಿ ಹಾಜರುಪಡಿಸಿರುವುದಿಲ್ಲ ಹಾಗೂ ನಾನು ಸದರಿ ಮುದ್ದೆಮಾಲನ್ನು ಪರೀಕ್ಷಿಸಿ ನಿ.ಪಿ–45 ರಂತೆ ಯಾವುದೇ ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮುದ್ದೆಮಾಲನ್ನು ಪರೀಕ್ಷಿಸದೇ ಇದ್ದರೂ ಸಹಃ ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ನಿ.ಪಿ–45 ರಂತೆ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದೂರಿನಲ್ಲಿ ಹಾಗೂ ಶವ ತನಿಖಾ ವರದಿಯಲ್ಲಿ ಮೃತನ ಮೈಮೇಲೆ ಕೇವಲ ಮೂರು ಗಾಯಗಳು ಮಾತ್ರ ಇರುವುದಾಗಿ ನಮೂದು ಇದ್ದು ನಾನು ನಿಪಿ–12 ಪಿ.ಎಂ ವರದಿಯಲ್ಲಿ ಎಂಟು ಗಾಯಗಳಾಗಿರುತ್ತದೆ ಎಂದು ಸೃಷ್ಟಿ ಮಾಡಿ ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೃತ ಸುರೇಶ್ ರವರು ಮಧ್ಯಪಾನ ಮಾಡಿ ಆಯಾ ತಪ್ಪಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡು ಮೃತ ಪಟ್ಟಿದ್ದು, ಸದರಿ ಪ್ರಕರಣಕ್ಕೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತಿಪಟೂರು**